# ತುಮಕೂರು ವಿಶ್ವವಿದ್ಯಾನಿಲಯ

ಬಿ.ಹೆಚ್ ರಸ್ತೆ, ತುಮಕೂರು – 572 103, ದೂರವಾಣಿ ಸಂಖ್ಯೆ : 0816–2254546


**ಸಂಖ್ಯೆ:ತುವಿ:ಸಿಬ್ಬಂದಿ:3991–ಸ್ನಾ.ಕೋ.ನೇ:2017–18/3288** **ದಿನಾಂಕ:29.11.2017**

## : ಅಧಿಸೂಚನೆ :

ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಖಾಲಿ ಇರುವ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಲ್ಲಿ ಹೈದ್ರಾಬಾದ್–ಕರ್ನಾಟಕ ಪ್ರಾಂತ್ಯಕ್ಕೆ (371(ಜೆ)) ಮೀಸಲಾದ ಹುದ್ದೆಗಳು ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಅರ್ಹ ಭಾರತೀಯ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ನಿಗಧಿತ ಅರ್ಜಿ ನಮೂನೆ/ವಿದ್ಯಾರ್ಹತೆ ಮತ್ತು ಇತರೆ ಶೈಕ್ಷಣಿಕ ಮಾನದಂಡಗಳನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ www.tumkuruniversity.ac.in ನಲ್ಲಿ ಪಡೆಯಬಹುದಾಗಿದೆ. ಸ್ವಗ್ರಾಮ ಪ್ರಮಾಣ ಪತ್ರವನ್ನು ಹೊಂದಿರುವ ಸ್ಥಳೀಯ ಅಭ್ಯರ್ಥಿಯು (ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013 ರ ಪ್ರಕರಣ 6 ರಲ್ಲಿ ಅರ್ಥೈಸಿರುವಂತೆ) ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ವಿದೇಶದಲ್ಲಿ ನೆಲಸಿರುವ ಭಾರತೀಯರು ಸಹ ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಲು 06.01.2018 ಕೊನೆಯ ದಿನಾಂಕವಾಗಿರುತ್ತದೆ. ಬ್ಯಾಂಕಿನಿಂದ ಡಿ.ಡಿ. ಪಡೆದ ನಂತರ ಅರ್ಹ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡಿ ಸಲ್ಲಿಸಬೇಕು. ನಂತರ ವೆಬ್‌ಸೈಟ್‌ನಿಂದ ಪಡೆದುಕೊಂಡ ಸ್ವೀಕೃತಿ ಅರ್ಜಿಯನ್ನು ಪ್ರಿಂಟ್ ತೆಗೆದುಕೊಳ್ಳಬೇಕು. ಪ್ರಿಂಟ್ ತೆಗೆದುಕೊಂಡ ಅರ್ಜಿಯ ಜೊತೆ ಅಗತ್ಯ ದಾಖಲಾತಿಗಳನ್ನು ಲಗತ್ತಿಸಿ ಮತ್ತು ಬ್ಯಾಂಕ್ ಡಿ.ಡಿ.ಯನ್ನು ಲಗತ್ತಿಸಿದ 08 ಸೆಟ್‌ಗಳ ಅರ್ಜಿಗಳನ್ನು ದಿನಾಂಕ:10.01.2018 ರೊಳಗೆ "ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು– 572 103", ಇವರಿಗೆ ಸಲ್ಲಿಸಬೇಕು.

"ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ" ಇವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ತುಮಕೂರು ವಿಶ್ವವಿದ್ಯಾನಿಲಯ ಶಾಖೆ" ಇಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ಪಡೆಯತಕ್ಕದ್ದು. (ಪ್ರಾಧ್ಯಾಪಕರ ಹುದ್ದೆಗೆ ರೂ. 2,000/– ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ರೂ. 1,500/–) (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1 ಅಭ್ಯರ್ಥಿಗಳಿಗೆ 50% ರಿಯಾಯಿತಿ ಇದೆ)

| ಕ್ರ. ಸಂ. | ವಿಭಾಗದ ಹೆಸರು | ಹುದ್ದೆ: ಪ್ರಾಧ್ಯಾಪಕರು |
|---|---|---|
| 1 | ಜೀವರಸಾಯನಶಾಸ್ತ್ರ/ಸಸ್ಯಶಾಸ್ತ್ರ/ಗ್ರಂಥಾಲಯ & ಮಾಹಿತಿ ವಿಜ್ಞಾನ/ಗಣಿತಶಾಸ್ತ್ರ/ಪ್ರಾಣಿಶಾಸ್ತ್ರ | 01–ಪರಿಶಿಷ್ಟ ಜಾತಿ(ಹೈ.ಕ) |
| 2 | ವ್ಯವಹಾರ ಆಡಳಿತ/ಇಂಗ್ಲೀಷ್/ರಾಜ್ಯಶಾಸ್ತ್ರ/ ಸಮಾಜಕಾರ್ಯ | 01–ಪರಿಶಿಷ್ಟ ಜಾತಿ(ಮ) (ಬ್ಯಾಕ್‌ಲಾಗ್) |
| | **ಒಟ್ಟು ಹುದ್ದೆಗಳು** | **02** |

| ಕ್ರ. ಸಂ. | ವಿಭಾಗದ ಹೆಸರು | ಹುದ್ದೆ: ಸಹಾಯಕ ಪ್ರಾಧ್ಯಾಪಕರು |
|---|---|---|
| 1 | ಜೀವರಸಾಯನಶಾಸ್ತ್ರ/ಸಸ್ಯಶಾಸ್ತ್ರ/ಗಣಿತಶಾಸ್ತ್ರ/ಪ್ರಾಣಿಶಾಸ್ತ್ರ | 01–ಪರಿಶಿಷ್ಟ ಜಾತಿ(ಹೈ.ಕ) |
| 2 | ವ್ಯವಹಾರ ಆಡಳಿತ/ವಾಣಿಜ್ಯಶಾಸ್ತ್ರ | 01–ಪರಿಶಿಷ್ಟ ಪಂಗಡ(ಹೈ.ಕ) |
| 3 | ಅರ್ಥಶಾಸ್ತ್ರ/ಇಂಗ್ಲೀಷ್/ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ/ಕನ್ನಡ/ ರಾಜ್ಯಶಾಸ್ತ್ರ/ಸಮಾಜಕಾರ್ಯ | 01–ಸಾಮಾನ್ಯ(ಮ) (ಹೈ.ಕ) |
| 4 | ಗಣಿತಶಾಸ್ತ್ರ | 01–ಪರಿಶಿಷ್ಟ ಜಾತಿ (ಬ್ಯಾಕ್‌ಲಾಗ್) |
| | **ಒಟ್ಟು ಹುದ್ದೆಗಳು** | **04** |